ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 101-105
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ತೇಜಸ್ವಿಯವರ ಕರ್ವಾಲೊ : ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳ ವಿಶ್ಲೇಷಣೆ

**ಶೇಖರ ಕೆ. ಕೆ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

***Abstract:***

*ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ಕನ್ನಡದ ಮಹತ್ವದ ಲೇಖಕರಲ್ಲಿ ಒಬ್ಬರು. ಇವರು ವೈಚಾರಿಕ ದೃಷ್ಟಿಯ ವೈಜ್ಞಾನಿಕ ಮನೋಭಾವದ ಹಿನ್ನೆಲೆಯಲ್ಲಿ ತಮ್ಮ ಸೃಜನಶೀಲ ಸಾಹಿತ್ಯ ಮತ್ತು ಸೃಜನೇತರ ಕೃತಿಗಳಲ್ಲಿ ವೈಜ್ಞಾನಿಕ ಅರಿವನ್ನು ಶ್ರುತಪಡಿಸುತ್ತಲೇ ಬಂದಿದ್ದಾರೆ. ಅವರ ಆರಂಭದ ಕಥೆ, ಕಾದಂಬರಿ, ನಾಟಕ ಮುಂತಾದ ಬರವಣಿಗೆಯ ಮೇಲೆ ನವ್ಯದ ಪ್ರಭಾವ ದಟ್ಟವಾಗಿದ್ದರೂ ತದನಂತರ ಅದರಿಂದ ವಿಮೋಚನೆ ಪಡೆದು, ಸಾಮಾಜಿಕ ಅರಿವಿನ ಲೇಖಕರಾಗಿ ರೂಪುಗೊಂಡದ್ದು ಮಹತ್ವದ ಸಂಗತಿ. ಅನುಭವ ಮತ್ತು ಅಭಿವ್ಯಕ್ತಿಯಲ್ಲಿ ತಮ್ಮ ಸಮಕಾಲೀನ ಲೇಖಕರಿಗಿಂತ ಭಿನ್ನರಾಗಿ ಸಹ ವ್ಯಕ್ತಿ ವಿಶಿಷ್ಟತೆಯನ್ನು ಮೆರೆದದ್ದು ಸಂತಸದ ಸಂಗತಿ. ಸಾಹಿತ್ಯ ವಲಯದಲ್ಲಿ ಬಹು ಚರ್ಚಿತಗೊಂಡ ತೇಜಸ್ವಿಯವರ 'ಕರ್ವಾಲೊ' ಬದುಕಿನ ವಿಸ್ಮಯವನ್ನು ಕುರಿತ ಕಾದಂಬರಿಯಾಗಿದೆ. ಮನುಷ್ಯ–ಪ್ರಕೃತಿ, ಮನುಷ್ಯ–ಸಮಾಜ, ಮನುಷ್ಯ–ಮನುಷ್ಯರ ಸಂಬಂಧಗಳ ಸಂಕೀರ್ಣತೆಯಲ್ಲಿ ಅವುಗಳನ್ನು ಕೇವಲ ಬೌದ್ಧಿಕವಾಗಿ ಅರ್ಥೈಸಿಕೊಳ್ಳಲಾಗದ ಅನಿವಾರ್ಯತೆಯಲ್ಲಿ ಸಮಕಾಲೀನ ವಿಚಾರಗಳನ್ನು, ಸಂವೇದನಾತ್ಮಕ ಸೂಕ್ಷ್ಮ ಅನುಭವಗಳನ್ನು ತೇಜಸ್ವಿ ತಮ್ಮ ಕೃತಿಗಳಲ್ಲಿ ಪರಿಣಾಮಕಾರಿಯಾಗಿ ತರಬಲ್ಲರೆಂಬುದಕ್ಕೆ 'ಕರ್ವಾಲೊ' ಒಂದು ಉತ್ತಮ ಉದಾಹರಣೆ ಎನಿಸಿದೆ.*

***Keywords:*** *ಕನ್ನಡ ಸಾಹಿತ್ಯ, ಪೂರ್ಣಚಂದ್ರ ತೇಜಸ್ವಿ, ಕರ್ವಾಲೊ, ಪ್ರಕೃತಿ ಮತ್ತು ಮನುಷ್ಯ.*

**ಪೀಠಿಕೆ**

ವಿಜ್ಞಾನ ಮತ್ತು ಪ್ರಕೃತಿಗಳ ಈ ಎರಡು ತುದಿಗಳ ನಡುವೆ ಕಾದಂಬರಿಯ ಪಾತ್ರಗಳು ಅನಾವರಣಗೊಳ್ಳುತ್ತವೆ. ನಿರೂಪಕರು ಮೈಸೂರಿನಲ್ಲಿರುವ ತಮ್ಮ ತಂದೆಗೆ ಜೇನನ್ನು ಕೊಳ್ಳಲು ಮೂಡುಗೆರೆಯ ಜೇನು ಸೊಸೈಟಿಗೆ ಹೋಗುವ ಪ್ರಸಂಗದಿಂದ ಈ ಕಾದಂಬರಿ ಚಾಲನೆ ಪಡೆಯುತ್ತದೆ. ಅಲ್ಲಿಯೇ ಇವರಿಗೆ ಸ್ಥಳೀಯ ವಿಜ್ಞಾನಿ ಮಂದಣ್ಣನ ಪರಿಚಯವೂ ಆಗುತ್ತದೆ. ಮಂದಣ್ಣ ಒಬ್ಬ ಸಹಜ ಪ್ರಕೃತಿ ವಿಜ್ಞಾನಿ. ನಿಸರ್ಗದ ಆಗುಹೋಗುಗಳನ್ನು ಅಲ್ಲಿನ ಕೀಟ, ಪಕ್ಷಿ, ಪ್ರಾಣಿಗಳ ಬಗೆಗೆ ಚೆನ್ನಾಗಿ ತಿಳಿದವನು. ಕನ್ನಡ ಬರೆಯಲೂ ಬಾರದ ಸ್ಥಿತಿಯಲ್ಲಿದ್ದಾನೆ. ಇವನು ಒಂದು ಬಗೆಯಲ್ಲಿ ಅನಕ್ಷರಸ್ಥನೆಂದೇ ಹೇಳಬಹುದು. ಮೂಡುಗೆರೆಯ ಪರಿಸರದಲ್ಲಿ ಮಂದಣ್ಣ ಒಬ್ಬ ಹಕ್ಕಿಪಕ್ಕಿ ಹುಳು ಹುಪ್ಪಟ್ಟೆ ಹಿಡಿಯುವ ಒಬ್ಬ ಅತೀ ಸಾಮಾನ್ಯ ವ್ಯಕ್ತಿ, ಅಪಾಪೋಲಿ ಮಾತ್ರ. ಆದರೆ ಮಂದಣ್ಣನ ನಿಸರ್ಗ ಜ್ಞಾನದ ಜೀವ ಸಂಕುಲದ ಬಗೆಗಿನ ಆಸಕ್ತಿ, ತಿಳುವಳಿಕೆಯನ್ನು ಸರಿಯಾಗಿ ಗ್ರಹಿಸಿದ್ದನು.

***Please cite this article as:*** ಶೇಖರ ಕೆ.ಕೆ. (2025). ತೇಜಸ್ವಿಯವರ ಕರ್ವಾಲೊ: ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(6), 101–105

ಕರ್ವಾಲೊ ಅವರಿಗೆ ಅವನೊಬ್ಬ ಅದ್ಭುತ ಪ್ರಕೃತಿ ವಿಜ್ಞಾನಿ. ಹುಟ್ಟು ನ್ಯಾಚುರಲಿಸ್ಟ್. ಇಂಥ ಮಂದಣ್ಣ ತಮ್ಮ ಸಂಶೋಧನಾ ಕೇಂದ್ರದಲ್ಲಿನ ಪ್ಯೂನ್ ಕೆಲಸವನ್ನು ತನಗೆ ಕೊಡಲಿಲ್ಲವೆಂದು ಬೇಸರಿಸಿಕೊಂಡಾಗ ತುಂಬಾ ನೊಂದುಕೊಂಡು ಮಂದಣ್ಣ ಒಬ್ಬ ರ್‍ಯಾಸ್ಕಾಲ್ ಎಂದು ಬಯ್ಯುತ್ತಾರೆ. ಇದಕ್ಕೆ ಕಾರಣ ಮಂದಣ್ಣನಂಥ ಒಬ್ಬ ಹುಟ್ಟು ಪ್ರಕೃತಿ ವಿಜ್ಞಾನಿ. ಕೀಟಶಾಸ್ತ್ರಜ್ಞನಿಗೆ ಪ್ಯೂನ್ ಕೆಲಸ ಕೊಡುವುದು ಅವನ ಯೋಗ್ಯತೆ ಮತ್ತು ಜ್ಞಾನವನ್ನು ಅವಮಾನಿಸಿದಂತೆ ಎಂಬ ಅಭಿಪ್ರಾಯ ಕರ್ವಾಲೊ ಅವರದ್ದು.

ಮೇಲ್ನೋಟಕ್ಕೆ ಕರ್ವಾಲೊ ಈ ಕಾದಂಬರಿಯ ನಾಯಕ ಪಾತ್ರದಂತೆ, ಕೇಂದ್ರ ವ್ಯಕ್ತಿಯಂತೆ ಕಂಡುಬರುತ್ತಾರೆ. ಆದರೆ ಕಾದಂಬರಿ ಬೆಳೆದಂತೆ ಮಂದಣ್ಣನ ಪಾತ್ರ ಮೈದುಂಬಿಕೊಳ್ಳುತ್ತಾ ಹೋಗಿ ಆತನ ವ್ಯಕ್ತಿತ್ವದ ವಿವಿಧ ಮುಖಗಳು ಬೆಳಗತೊಡಗಿ, ಮಂದಣ್ಣ, ಕರ್ವಾಲೋ ಅವರ ಗುರುವಿನಂತಹ ಮುಖ್ಯ ಪಾತ್ರವಾಗಿ ಬಿಡುತ್ತವೆ. ಅವನಿಗೆ ವೈಜ್ಞಾನಿಕ ಭಾಷೆಯಲ್ಲಿ ಅಭಿವ್ಯಕ್ತಿಸುವ ಸಾಮರ್ಥ್ಯ ಇಲ್ಲದಿದ್ದರೂ ಮಂದಣ್ಣ ಪ್ರಕೃತಿಯ ಅನೇಕ ವಿಜ್ಞಾನ ವಿಸ್ಮಯಗಳನ್ನು ಬಲ್ಲವನು. ಕಾಡಿನಲ್ಲಿಯೇ ಹುಟ್ಟಿ ಬೆಳೆದ ಅವನಿಗೆ ಗ್ಲೋವರ್ಮ್ ಆಗಲಿ, ಹಾರುವ ಓತಿಯಾಗಲಿ ಹೊಸ ಶೋಧಗಳಲ್ಲ. ತನ್ನ ಬದುಕಿನೊಂದಿಗೆ ಕಂಡುಕೊಂಡ ಸತ್ಯಗಳು. ಇಂಥ ಅನೇಕ ಸತ್ಯಗಳನ್ನು, ಅದ್ಭುತಗಳನ್ನು ಪ್ರಕೃತಿ ವೈಚಿತ್ರ್ಯಗಳನ್ನು ಆತ ಬಲ್ಲ. ಆತನ ತಿಳಿವಿನ ಪಾತಳಿ ದೊಡ್ಡದು. ನಾಗರಿಕ ಪರಿಸರದಲ್ಲಿ ಗೇಲಿಯ ವಸ್ತುವಾಗಬಲ್ಲ ಮಂದಣ್ಣ ಪ್ರಕೃತಿಯ ಸಾನ್ನಿಧ್ಯದಲ್ಲಿ ಒಬ್ಬ ಅದ್ಭುತ ಪ್ರಕೃತಿಶಾಸ್ತ್ರಜ್ಞ.

ನಿರೂಪಕ ಪಾತ್ರದಲ್ಲಿರುವ ತೇಜಸ್ವಿಯವರು ಜೇನಿನ ಬಗ್ಗೆ ಹಾಗೂ ಜೇನುಹುಳುಗಳ ಬಗ್ಗೆ ನನಗೆ ಮೊದ ಮೊದಲು ಅಷ್ಟೊಂದು ತಿಳುವಳಿಕೆ ಇರಲಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈ ಜೇನುಹುಳುಗಳು ಮಾನವನ ಮೊದಲ ಶತ್ರು. ಹಾವಿನಂತೆಯೇ ಮಾನವನನ್ನು ಕಚ್ಚಲು, ಕೊಲ್ಲಲು ಯತ್ನಿಸುವ ಕೀಟವೆಂದು ಭಾವಿಸಿದ್ದರು. ನಂತರ ತಮ್ಮ ಅಭಿಪ್ರಾಯವನ್ನು ನಿಧಾನವಾಗಿ ಬದಲಾಯಿಸಿಕೊಳ್ಳುತ್ತಾರೆ. ಇದಕ್ಕೆ ಕಾರಣ ಮಂದಣ್ಣ. ಈ ಮಂದಣ್ಣನ ಸಹಾಯದಿಂದ ತಮ್ಮ ತೋಟದಲ್ಲಿ ಪೆಟ್ಟಿಗೆಜೇನು ಸಾಕಾಣಿಕೆಯನ್ನು ಪ್ರಾರಂಭಿಸುತ್ತಾರೆ.

ಮಲೆನಾಡು ನಿಸರ್ಗದ ಮಡಿಲು. ಇಲ್ಲಿ ನಾನಾ ತರಹದ ವೃಕ್ಷ ಜಾತಿಗಳು, ಸಸ್ಯ ಜಾತಿಗಳಿವೆ. ಹಾಗಾಗಿ ಸಹಜವಾಗಿಯೇ ನಾನಾ ಬಗೆಯ ವೃಕ್ಷಗಳೂ ಸಹ ಇಲ್ಲಿ ಲಭ್ಯವಾಗುತ್ತವೆ. ಮಲೆನಾಡಿನಲ್ಲಿ ಅರಳುವ 'ಗುರಗಿ' ಎನ್ನುವ ಒಂದು ಜಾತಿಯ ಹೂ ಎಂಟು ವರ್ಷಗಳಿಗೊಮ್ಮೆ ಹೂ ಬಿಡುತ್ತದೆ. ಈ ಸಸ್ಯ ಹೂ ಬಿಟ್ಟ ವರ್ಷ ಮಲೆನಾಡಿನಲ್ಲಿ ಊಹಾತೀತ ಪ್ರಮಾಣದಲ್ಲಿ ಜೇನು ಉತ್ಪಾದನೆಯಾಗುತ್ತದೆ. ಇಂತಹ ವಿಶೇಷ ಹೂಗಳಿಂದ ಬಹಳ ರುಚಿಕರವಾದ ಜೇನು ಉತ್ಪಾದನೆಯನ್ನು ಜೇನುಹುಳು ಮಾಡುತ್ತದೆ ಎಂಬ ಸಂಗತಿಯನ್ನು ತೇಜಸ್ವಿಯವರಿಗೆ ಮಂದಣ್ಣ ವಿವರಿಸುತ್ತಾನೆ. ಮಡಕೆ ತುಪ್ಪ ಹಾಗೂ ಬಾಟ್ಲಿ ತುಪ್ಪಕ್ಕೆ ಇರುವ ವ್ಯತ್ಯಾಸವನ್ನು ವಿವರಿಸಿದ ಬಗೆ ಕುತೂಹಲಕಾರಿಯಾದದ್ದು. "ಬಾಟ್ಲಿದಾದರೆ ಮೆಶೀನಿನಲ್ಲಿ ತೆಗೆದಿರ್ತೆವೆ. ಮಡಕೆಯದು ಕೈಯಲ್ಲಿ ಹಿಂಡಿ ತೆಗೆದಿರ್ತೆವೆ. ಮಡಕೆ ತುಪ್ಪ ನೋಡೋಕೆ ಕೊಂಚ ಮಂಕಾಗಿರ್ತದೆ. ಅನುಭವಸ್ಥರು ಕೈಯಲ್ಲಿ ಹಿಡಿದು ನೋಡಿದರೆ ತುಪ್ಪದ ಹೊಳಪಿನಲ್ಲಿ ಮಡಕೆ ತುಪ್ಪಕ್ಕೂ, ಬಾಟ್ಲಿ ತುಪ್ಪಕ್ಕೂ ವ್ಯತ್ಯಾಸ ಗೊತ್ತಾಗ್ತದೆ"[1] ಎಂಬ ವಿಷಯವನ್ನು ಮಂದಣ್ಣ ಲೇಖಕರಿಗೆ ವಿವರಿಸಿದನು.

ಕರ್ವಾಲೊ ಒಬ್ಬ ವಿಜ್ಞಾನಿ ಅಂದರೆ ಕೀಟ ವಿಜ್ಞಾನಿ, ಸಸ್ಯ ವಿಜ್ಞಾನಿ, ಪ್ರಾಣಿ ವಿಜ್ಞಾನಿಯೂ ಹೌದು. ಮಾನವತವಾದಿಯೂ ಕೂಡ. ಮೂಡಿಗೆರೆಯ ಭತ್ತದ ಸಂಶೋಧನಾ ಕೇಂದ್ರಕ್ಕೆ ವಿಜ್ಞಾನಿಯಾಗಿ ನೇಮಕಗೊಂಡವನು. ಭತ್ತಕ್ಕೆ

[1]. ಕೆ.ಪಿ.ಪೂರ್ಣಚಂದ್ರ ತೇಜಸ್ವಿ. *ಕರ್ವಾಲೊ.* ಪುಟ. 4

ಕೀಟಗಳಿಂದ ತಗಲುವ ರೋಗಗಳಿಗೆ ಸೂಕ್ತ ಪರಿಹಾರ ಕಂಡುಹಿಡಿಯಲು ಬಂದವರು, ಆ ಮೂಲಕ ರೈತರ ನೆರವಾಗಿ ನಿಂತವರು. ವಾಸ್ತವದಲ್ಲಿ ಕರ್ವಾಲೊ ಒಬ್ಬ ಸತ್ಯಶೋಧಕ, ಜೀವನದ ಬಗ್ಗೆ, ಸಂಶೋಧನೆಯ ಬಗ್ಗೆ ಅಪಾರ ಶ್ರದ್ಧೆ, ಶಿಸ್ತು ಹೊಂದಿದ ವ್ಯಕ್ತಿ. ನಿಸರ್ಗದಲ್ಲಿನ ಎಲ್ಲಾ ಬಗೆಯ ಪ್ರಾಣಿ, ಪಕ್ಷಿ ಮುಂತಾದ ಜೀವ ಸಂಕುಲಗಳ ಬಗ್ಗೆ ತುಂಬಾ ಪ್ರೀತಿ, ಕರುಣೆ ಹೊಂದಿದ ವಾಸ್ತವವಾದಿ ವಿಜ್ಞಾನಿ. ನಿರೂಪಕರ ಭತ್ತದ ಗದ್ದೆಯ ಭತ್ತಕ್ಕೆ ರೋಗ ತಗುಲಿ ಅದು ನಾಶವಾಗುತ್ತಿರ ಬೇಕಾದರೆ ಅದರ ರಹಸ್ಯವನ್ನು ಭೇದಿಸಿ ಭತ್ತದ ಕಾಂಡದ ಬುಡದಲ್ಲಿ ಅವಿತುಕೊಂಡು ಭತ್ತವನ್ನು ಕಡಿದು ನಾಶಪಡಿಸುತ್ತಿದ್ದ 'ಆರ್ಮಿವರ್ಮ್' ಕೀಟವನ್ನು ಪತ್ತೆ ಹಚ್ಚಿ ಅದರ ನಿವಾರಣೆಗೆ ವೈಜ್ಞಾನಿಕ ಸಲಹೆ ನೀಡಿದವರು ಈ ಕರ್ವಾಲೊ.

ಬೇಸಾಯದಲ್ಲಿ ನಷ್ಟ ಉಂಟಾಗಿ ಗದ್ದೆ, ತೋಟ ಮಾರಿ ನಗರಕ್ಕೆ ಮರಳಬೇಕೆಂದು ಚಿಂತಿಸುತ್ತಿದ್ದ ನಿರೂಪಕರಿಗೆ ಕಾಡಿನ ಮಹತ್ವವನ್ನು ತಿಳಿಸಿ ಅವರು ಅಲ್ಲಿಯೇ ನೆಲೆನಿಲ್ಲುವಂತೆ ಮಾಡಿದ ಕರ್ವಾಲೊ ಚಿಂತನೆ ನಿಜಕ್ಕೂ ಮಾನವೀಯವಾಗಿದ್ದು, ಅನುಕರಣೀಯೂ ಎನ್ನಬಹುದು. ಹೀಗೆ ಕರ್ವಾಲೊ ಒಬ್ಬ ಪ್ರಕೃತಿ ವಿಜ್ಞಾನಿಯಾಗಿ, ಸಸ್ಯ ವಿಜ್ಞಾನಿಯಾಗಿ, ಕೀಟಶಾಸ್ತ್ರಜ್ಞನಾಗಿ, ಮಾನವಾಂತಃಕರಣದ, ಜೀವಪರ ಕಾಳಜಿಯ ವ್ಯಕ್ತಿಯಾಗಿ, ಸತ್ಯಶೋಧಕನಾಗಿ ಕಾದಂಬರಿಯಲ್ಲಿ ಚಿತ್ರಣಗೊಂಡಿರುವುದು, ನಿರೂಪಕನ ಪಾತ್ರವಹಿಸಿರುವ ಲೇಖಕ ತೇಜಸ್ವಿಯವರ ಹೊಸ ಬಗೆಯ ನವೀನ ಚಿಂತನೆಯ, ವೈಜ್ಞಾನಿಕ ಹೊಳಹಿನ ಆಲೋಚನೆಯ ಪ್ರತೀಕವೆನ್ನಬಹುದು.

ರಾತ್ರಿ ವೇಳೆ ಬಾಲದ ಬೆಳಕನ್ನು ಪ್ರದರ್ಶಿಸಿ, ಶಂಖು ಹುಳಗಳನ್ನು ಆಕರ್ಷಿಸಿ ಅವುಗಳನ್ನು ತಿನ್ನುವ ಗ್ಲೋವರ್ಮ್(ಮಿಂಚುಹುಳು)ನ್ನು ಮಂದಣ್ಣನ ಮೂಲಕ ಪತ್ತೆ ಹಚ್ಚಿ ಅದನ್ನು ತಮ್ಮ ಸಂಶೋಧನಾ ಕೇಂದ್ರಕ್ಕೆ ತಂದು ರಿಸರ್ಚ್ ಆರಂಭಿಸುವ ಕರ್ವಾಲೊ, ಮಂದಣ್ಣ ನೋಡಿದ್ದ ಹಾರುವ ಓತಿಯನ್ನು ಪತ್ತೆ ಹಚ್ಚಿ ಕೋಟ್ಯಾನುಕೋಟಿ ವರುಷಗಳ ಚರಿತ್ರೆ ಹೊಂದಿದ, ಜೀವವಿಕಾಸದ ಪರಮ ಸತ್ಯವನ್ನು ತನ್ನ ಗರ್ಭದಲ್ಲಿರಿಸಿಕೊಂಡ ಅದರ ರೂಪ ನಡೆವಳಿಯ ಬಗ್ಗೆ ಚಿಂತಿಸುವ, ತಾವು ಗ್ರಂಥಗಳ ಮೂಲಕ ಪಡೆದ ಪ್ರಕೃತಿ ಜ್ಞಾನವನ್ನು ಇಂಥ ಸಂಶೋಧನೆಗಳ ಮೂಲಕ ಅನ್ವಯಿಕವಾಗಿ ಶೋಧಿಸಿಕೊಳ್ಳುವತ್ತ ಸಾಗುವುದು ಅವರ ಜ್ಞಾನದ ಹಸಿವು ಮತ್ತು ಸತ್ಯಶೋಧಕ ನಿಷ್ಠೆಯನ್ನು ಪ್ರಕಟಪಡಿಸುತ್ತದೆ. ಕರ್ವಾಲೊ ಒಬ್ಬ ವಿಜ್ಞಾನಿ, ನಿಸರ್ಗದ ಮೂಲಕ ಜ್ಞಾನದ ಚಲನಶೀಲತೆಯನ್ನು ಕಂಡುಕೊಳ್ಳುವ ತುಡಿತವುಳ್ಳವನು. ನಿಸರ್ಗ ಮಗ್ನತೆ–ಕರ್ವಾಲೊ ಚಟುವಟಿಕೆಗಳ ಬಹುಮುಖ್ಯ ಅಭಿವ್ಯಕ್ತಿಯಾಗಿದ್ದು, ಈತನಿಗೆ ಮಂದಣ್ಣ ನಿಸರ್ಗದ ಬೆಳಕಂಡಿಯಾಗಿ ಕಾಣುತ್ತಾನೆ.

ಈ ಕಾದಂಬರಿಯ ವಿಷಯವಸ್ತುವಾಗಿ ಆವರಿಸಿ ಕುಳಿತಿರುವುದು ಹಾರುವ ಓತಿ. ಈ ಹಾರುವ ಓತಿಯ ಹುಡುಕಾಟವೇ ಇಲ್ಲಿ ಪ್ರಸ್ತಾಪಗೊಳ್ಳುವ ಕಥೆಯ ಹಂದರ. ಇದೊಂದು ಪ್ರಾಚೀನತೆಯ ಪಳೆಯುಳಿಕೆಯಾಗಿದೆ. "ಶಿಲಾಪದರಗಳಲ್ಲಿ ಇದರ ಪಳೆಯುಳಿಕೆಗಳು ಸಿಕ್ಕಿವೆ. ಜ್ವಾಲಾಮುಖಿ ಬೂದಿಯ ಪದರಗಳಲ್ಲಿ ಇದರ ಅಚ್ಚುಗಳು ಬಿದ್ದಿವೆ. ಆದರೆ ಕಾಲವನ್ನು ಪತ್ತೆಹಚ್ಚುವ ಮನುಷ್ಯನ ಎಲ್ಲಾ ವಿಧಾನ, ಉಪಕರಣಗಳೂ ಸೋತು ಹೋಗಿವೆ. ರೇಡಿಯೋ ಕಾರ್ಬನ್ ಡೇಟಿಂಗ್ ಅಂತ, ಪೊಟ್ಯಾಶಿಯಂ ಆರ್ಗಾನ್ ಡೇಟಿಂಗ್ ಅಂತ ಹೊಸ ಹೊಸ ಕಾಲಮಾಪನ ವಿಧಾನಗಳನ್ನು ಕಂಡು ಹಿಡಿದರು. ಆದರೆ ಅವು ಯಾವುದರಿಂದಲೂ ಸಾಧ್ಯವಾಗಿಲ್ಲ. ಜೆಕೋಸ್ಕಿ ಈಚೆಗೆ ಬರೆದ ಕಾಗದದಲ್ಲಿ ಸ್ಥೂಲವಾಗಿ ಒಂದು ಕಾಲದ ಪರಿಮಾಣ ಹೇಳಿದ್ದಾರೆ. ಆ ಸಂಖ್ಯೆಗೆ ಏನೆಂದು ಕರೀತೀರೂ ಕರೀರಿ. ಅವರು ಆರರ ಮುಂದೆ ಏಳು ಸೊನ್ನೆಗಳನ್ನು ಹಾಕಿದ್ದಾರೆ. ಇದು ಸ್ಥೂಲವಾಗಿ, ಆ ಪ್ರಾಣಿ ಇದಕ್ಕಿಂತಲೂ

ಹಿಂದಿನದಿರಬಹುದು."[2] ಎಂಬ ಅಂಶ ಕುತೂಹಲಕಾರಿಯಾಗಿದೆ.

ಈ ಪ್ರಾಣಿ ಜಾತಿಗಳು ಹುಟ್ಟಿದ್ದು ಬಹಳ ವರುಷಗಳ ಹಿಂದೆ. ಎಷ್ಟು ವರುಷಗಳ ಹಿಂದೆ ಅಂತ ಹೇಳಲು ಸಾಧ್ಯವೇ ಆಗೊಲ್ಲ. ಅಷ್ಟೊಂದು ವರುಷಗಳ ಹಿಂದೆ ಈ ಜಾತಿಯ ಓತಿಗಳು ಚರಿತ್ರಾಪೂರ್ವ ಪ್ರಾಚೀನ ಯುಗಗಳಿಗೆ ಸೇರಿದವು. ಇವೇ ದೊಡ್ಡ ದೊಡ್ಡ ಬೃಹದಾಕಾರದ ಪ್ರಾಣಿಗಳಾಗಿ ಬೆಳೆದು ಇಡೀ ಭೂಮಂಡಲವನ್ನೆಲ್ಲಾ ವ್ಯಾಪಿಸಿ ಬಿಟ್ಟಿದ್ದವು. ಆದರೆ ಇವುಗಳ ಮೆದುಳನ್ನು ಮೀರಿ ಇವುಗಳ ಮೈ ಬೆಳೆದು ಬಿಟ್ಟಿತು. ಭೌಗೋಳಿಕ ವ್ಯತ್ಯಾಸಗಳಿಗೆ ಹೊಂದಿಕೊಂಡು ಬದುಕಲು ಇವಕ್ಕೆ ಸಾಧ್ಯವಾಗಲಿಲ್ಲ. ಯಾವುವೋ ಅಗೋಚರ ಕಾರಣಗಳಿಂದಾಗಿ ಅವೆಲ್ಲಾ ಸರ್ವನಾಶ ಹೊಂದಿ ನಾಮಾವಶೇಷವಾಗಿ ಹೋದವು. ಆದರೂ ಒಂದೋ ಎರಡೋ ಪ್ರಾಣಿಗಳು ಭೂಮಿ ಮೇಲೆ ಹಾಗೂ ಇನ್ನೊಂದೆರೆಡು ನೀರಿನಲ್ಲಿ ಹೇಗೋ ಹೊಂದಿಕೊಂಡು ಉಳಿದುಬಿಟ್ಟವು. ಆದ್ದರಿಂದ ಇವು ಕೋಟಿಗಟ್ಟಲೆ ವರುಷಗಳ ಹಿಂದಿನ ಗುಟ್ಟನ್ನೆಲ್ಲಾ ತನ್ನ ಹೊಟ್ಟೆಯೊಳಗೆ ಇಟ್ಟುಕೊಂಡ ಅಪೂರ್ವ ಜೀವಿಗಳಾಗಿವೆ.

ಬಿರ್ಯಾನಿ ಕರಿಯಪ್ಪ ಒಬ್ಬ ಅಡುಗೆ ಭಟ್ಟ ಮತ್ತು ಅಡುಗೆ ಕಂಟ್ರಾಕ್ಟರ್, ಮದುವೆ, ಮುಂಜಿ, ತಿಥಿ, ತೊಟ್ಟಿಲುಶಾಸ್ತ್ರ ಮುಂತಾದ ಸಂದರ್ಭಗಳಿಗಾಗಿ ಅಡುಗೆ ಮಾಡುವ ಭಟ್ಟ ಮತ್ತು ಅಡುಗೆ ಕಂಟ್ರಾಕ್ಟರ್ ಎಲ್ಲಾ ಬಗೆಯ ಅಡುಗೆಯನ್ನು ಚೆನ್ನಾಗಿಯೇ ಮಾಡಿ ಆ ಭಾಗದಲ್ಲಿ ಹೆಸರು ಮಾಡಿದ್ದ. ಈತ 'ಬಿರಿಯಾನಿ' ತಯಾರಿಸುವುದರಲ್ಲಿ ಸ್ಪೆಷಲಿಸ್ಟ್ ಹಾಗಾಗಿ ಈತನಿಗೆ 'ಬಿರ್ಯಾನಿ ಕರಿಯಪ್ಪ' ಎಂದು ಹೆಸರು ಬಿದ್ದಿತ್ತು. ಅಡುಗೆ ಮಾತ್ರವಲ್ಲ ಬೇಟೆ, ಈಜು, ಮರು ಹತ್ತುವುದು, ಹಕ್ಕಿ ಹಿಡಿಯುವುದರಲ್ಲಿಯೂ ಈತ ಪಾರಂಗತ. ಕಾಡಿನ ಮರವೊಂದರ ಕಾಂಡದ ಮೇಲೆ ಕುಳಿತ ಹಾರುವ ಓತಿಯನ್ನು, ಮರವನ್ನು ಅತಿವೇಗದಲ್ಲಿ ಹತ್ತಿ ಅದರ ಬಾಲವನ್ನು ಹಿಡಿದು ನಿಲ್ಲಿಸಿದವನು ಈ ಕರಿಯಪ್ಪನೆ, ಕೊನೆಗೆ ಅವನ ಕೈಜಾರಿ ಆ ಓತಿ ತಪ್ಪಿಸಿಕೊಂಡು ಬಿಡುತ್ತದೆ. ಹೀಗೆ ಈತ ಕರ್ವಾಲೋ ಅವರ ಹಾರುವ ಓತಿಯನ್ನು ಪತ್ತೆಹಚ್ಚುವ ಶೋಧನ ಕಾರ್ಯದಲ್ಲಿ ತೊಡಗಿಸಿಕೊಂಡದ್ದು ಒಂದು ವಿಶೇಷವೆನ್ನಬೇಕು. ಅಲ್ಲದೆ ಉಡವನ್ನು ಹಾರುವ ಓತಿಯೆಂದು ಭ್ರಮಿಸಿ ಕಟ್ಟಿಹಾಕಿ ಅದರ ಸಾವಿಗೆ ಮತ್ತು ಸಂಗಡಿಗರೆಲ್ಲರ ಕೋಪಕ್ಕೂ ಈತ ಈಡಾಗುತ್ತಾನೆ. ಹಾವುಗೊಲ್ಲರ ಎಂಗ್ಟನ ಬಗೆಗೂ ಇಲ್ಲಿ ಚರ್ಚಿಸುವ ಅಗತ್ಯವಿದೆ ಎನಿಸುತ್ತದೆ. ಈತನ ವಾಸ ಕಾಡಿನಲ್ಲಿ, ಪುಂಗಿ ಊದಿ ಹಾವು ಹಿಡಿಯುವುದು ಈತನ ಮುಖ್ಯ ಕಸುಬು, ಅಲ್ಲದೆ ಹಾವು, ಮುಂಗುಸಿ, ನೀರುನಾಯಿಗಳಂಥ ಪ್ರಾಣಿಗಳ ಚರ್ಮ ಸುಲಿದು ಜೀವನ ಸಾಗಿಸುವುದಾಗಿದೆ.

ವಿಜ್ಞಾನಿ ಕರ್ವಾಲೊ, ನಿರೂಪಕನ ಪಾತ್ರ ವಹಿಸಿರುವ ಲೇಖಕ, ಮಂದಣ್ಣ, ಕರಿಯಪ್ಪ, ಎಂಗ್ಟ – ಮುಂತಾದ ಪಾತ್ರಗಳು ಮತ್ತು ವೈಲಕ್ಷಣ್ಯಗಳು ಕಾಡು, ಕಾಡಿನ ಆರ್ಮಿವರ್ಮ್, ಗ್ಲೋವರ್ಮ್, ವಿವಿಧ ಬಗೆಯ ಜೇನುಗಳು, ಹಂದಿ, ಹಾವು ಮುಂತಾದ ವಿಚಿತ್ರ ಬಗೆಯ ಹುಳ ಹುಪ್ಪಟೆಗಳು, ಪ್ರಾಣಿ ಪಕ್ಷಿಗಳು– ಮುಂತಾದವುಗಳಿಂದ ಕಾದಂಬರಿ ಬೆಳೆಯುತ್ತಾ ಹೋಗಿ ಕೊನೆಗೆ ಹರಸಾಹಸ ಮಾಡಿ ಹಾರುವ ಓತಿಯನ್ನು ಶೋಧಿಸಿ ಹಿಡಿದರೂ ಅದು ತಪ್ಪಿಸಿಕೊಂಡು ಕೋಡಗಲ್ಲಿನ ಅಂಚಿನಿಂದ ಪ್ರಪಾತದ ಕಡೆಗೆ ಕುಪ್ಪಳಿಸುತ್ತ ಚಿಮ್ಮಿ ತೇಲಿ ತೇಲಿ ನೀಲಿಯ ಅಸ್ಪಷ್ಟ ಶೂನ್ಯದತ್ತ ಸುಯ್ಯನೆ ಸಾಗಿ ಅನಂತ ಶೂನ್ಯದಲ್ಲಿ ಲೀನವಾಗುತ್ತದೆ. ಆ ಮೂಲಕ ಜೀವವಿಕಾಸದಂಥ ಅನ್ವೇಷಣೆ ಅಷ್ಟು ಸುಲಭವಲ್ಲ ಎಂಬ ಅರಿವನ್ನು ಓದುಗ ಪಡೆಯುತ್ತಾನೆ. ಜೀವವಿಕಾಸದ ಪಥವನ್ನು ಯಾರಿಗೂ ಪೂರ್ತಿಯಾಗಿ ಭೇದಿಸುವುದು ಸಾಧ್ಯವಿಲ್ಲವೆಂಬ ಸತ್ಯವೂ ಮನದಟ್ಟಾಗುತ್ತದೆ ಮತ್ತು ಈ ಶೋಧ ನಿರಂತರವಾಗಿ

[2].ಅದೇ, ಪುಟ. 78

ನಡೆಯುವ ಪ್ರಕ್ರಿಯೇ ಹೊರತು ಎಲ್ಲೋ ಒಂದು ಕಡೆ ನಿಲ್ಲವಂಥದ್ದಲ್ಲ ಎಂಬ ಅರಿವೂ ಮೂಡುತ್ತದೆ. ಹಾರುವ ಓತಿಯನ್ನು ಶೋಧಿಸಿ ಹಿಡಿಯುವುದೇ ಈ ಕಾದಂಬರಿಯ ಮುಖ್ಯ ಉದ್ದೇಶವಾದಂತಿಲ್ಲ ಮನುಷ್ಯ ಪ್ರಕೃತಿಯನ್ನು ಮತ್ತು ನಿಸರ್ಗದ ಆಗು–ಹೋಗುಗಳನ್ನು ಕಂಡರಿಸುವ ಆಸಕ್ತಿಯೂ ಇಲ್ಲಿರುವುದನ್ನು ಗಮನಿಸಬೇಕಾಗುತ್ತದೆ.

**ಆಕರ ಗ್ರಂಥ**


- ಪೂರ್ಣಚಂದ್ರ ತೇಜಸ್ವಿ. ಕೆ.ಪಿ. (2013). *ಕರ್ವಾಲೊ.* ಪುಸ್ತಕ ಪ್ರಕಾಶನ.